ಡಾ. ಗಾಂಧೇರ್ ಭಾಯಿ. ಅವರು ತಮ್ಮ ಚೀಲವನ್ನು ಎತ್ತಿಕೊಂಡು ಹ್ಯಾರಿಯ ರೂಮಿಗೆ ಹೆಜ್ಜೆಹಾಕಿದರು. ನಾನೂ ಅವರನ್ನು ಹಿಂಬಾಲಿಸಿದೆ. ಹ್ಯಾರಿ ಎಚ್ಚರವಾಗಿಯೇ ಇದ್ದ. ಅವನ ಕಣ್ಣುಗಳು ಕಿರಿದಾಗಿ ಹೊಳೆಯುತ್ತಿದ್ದವು. ಡಾ. ಗಾಂಧೇರ್ ಭಾಯಿ ಕಿಂಚಿತ್ತೂ ಶಬ್ದ ಮಾಡದೆ ಹ್ಯಾರಿಯ ಮಂಚದ ಬಳಿ ಸಾಗಿದರು. ಯಾವುದೋ ಪ್ರಾಚ್ಯವಸ್ತು ಮುಟ್ಟುತ್ತಿರುವಂತೆ ಹ್ಯಾರಿಯ ಪೈಜಾಮ ಶರ್ಟಿನ ತೋಳುಗಳನ್ನು ಮೆಲ್ಲಗೆ ಭುಜಗಳ ಮಟ್ಟಕ್ಕೆ ಮೇಲೇರಿಸಿ ಮಡಚಿದರು. ಅವರು ಮಂಚದಿಂದ ಸಾಕಷ್ಟು ದೂರದಲ್ಲಿರುವುದು ನಾನು ಗಮನಿಸಿದೆ. ಡಾಕ್ಟರ್ ಗಾಂಧೇರ್ ಭಾಯಿ ಹ್ಯಾರಿ ಪೋಪನನ್ನು ಉದ್ದೇಶಿಸಿ, 'ಹ್ಯಾರಿ ನಾನು ನಿನಗೊಂದು ಇಂಜೆಕ್ಷನನ್ನು ಕೊಡುತ್ತೇನೆ. ಅಂತಾ ನೋವೇನೂ ಅನಿಸೊಲ್ಲ. ನೀನು ಮಾತ್ರ ಕಿಂಚಿತ್ತೂ ಮಿಸುಕಾಡಬಾರದು. ನಿನ್ನ ಹೊಟ್ಟೆಯ ಮಾಂಸಖಂಡಗಳನ್ನು ಬಿಗಿಗೊಳಿಸಬೇಡ. ಸಡಿಲವಾಗಿರಲಿ...'

**ಹ್ಯಾರಿ ಮೊದಲಿನಂತೆಯೇ ನಿಶ್ಚಲನಾಗಿ ಮಲಗಿದ್ದ. ಅವನ ಮುಖ ಬಿಳುಚಿಕೊಂಡಿತ್ತು ಮತ್ತು ಅವನು ಧಾರಾಳವಾಗಿ ಬೆವರು ಹರಿಸುತ್ತಿದ್ದ. ಅವನು ನನ್ನ ಕಡೆಗೆ ನೋಡಿದ. ನಾನು ಅವನಿಗೆ ಧೈರ್ಯ ತುಂಬುವವನಂತೆ ಮುಗುಳ್ನಕ್ಕೆ. ಡಾಕ್ಟರ್ ಗಾಂಧೇರ್ ಭಾಯಿ ಮಂಚದ ಕೆಳಗೆ ಕುಕ್ಕರುಗಾಲಿನಲ್ಲಿ ಕುಳಿತುಕೊಂಡರು...**

ಹ್ಯಾರಿ ಪೋಪ್ ಸಿರಿಂಜನ್ನೇ ನೋಡತೊಡಗಿದ. ಗಾಂಧೇರ್ ಭಾಯಿ ತಮ್ಮ ಬ್ಯಾಗಿನಿಂದ ಒಂದು ರಬ್ಬರ್ ಟ್ಯೂಬನ್ನು ಹೊರತೆಗೆದು ಸ್ವಲ್ಪವೂ ಅಲುಗಾಡದಂತೆ ಹ್ಯಾರಿಯ ಭುಜಕ್ಕೆ ಕಟ್ಟುಹಾಕಿ ಸ್ಪಿರಿಟನ್ನು ಸವರಿದರು. ಹತ್ತಿಯನ್ನು ನನ್ನ ಕೈಗಿತ್ತು ಸಿರಿಂಜನ್ನು ತೆಗೆದುಕೊಂಡರು. ಅದನ್ನು ಬೆಳಕಿಗೆ ಹಿಡಿದು ಅದರಲ್ಲಿದ್ದ ಸ್ವಲ್ಪ ಹಳದಿ ದ್ರವವನ್ನು ಹೊರಹಾಕಿದರು. ರಬ್ಬರ್ ಟ್ಯೂಬ್ ಬಿಗಿಯಾಗಿ ಕಟ್ಟಿದ್ದರಿಂದ ಆ ಜಾಗದಲ್ಲಿ ಹ್ಯಾರಿಯ ನೀಲಿನರ ಎದ್ದು ಕಾಣುತ್ತಿತ್ತು. ಹ್ಯಾರಿಯ ಮುಖದಿಂದ ಬೆವರು ಬಸಿಯುತ್ತಿತ್ತು. ಡಾಕ್ಟರ್ ಗಾಂಧೇರ್ ಭಾಯಿ ಕೊಂಚವೂ ಮಿಸುಕಾಡದೆ ಹ್ಯಾರಿಗೆ ಇಂಜೆಕ್ಷನ್ ಚುಚ್ಚಿದರು. ಹ್ಯಾರಿಯ ಕಣ್ಣುಗಳು ಮಾಡಿಗೆ ನೆಟ್ಟಿದ್ದವು. ಕಲ್ಲಿನ ಮೂರ್ತಿಯಂತೆ ನಿಶ್ಚಲನಾಗಿದ್ದ ಹ್ಯಾರಿ ಮೆಲ್ಲಗೆ ದೃಷ್ಟಿಯನ್ನು ಡಾಕ್ಟರರ ಕಡೆಗೆ ಹರಿಸಿದ.

'ಮಿಸ್ಟರ್ ಪೋಪ್ ಇನ್ನು ನಿಶ್ಚಿಂತರಾಗಿರಿ. ಇನ್ನು ನಿಮಗೆ ಹಾವು ಕಚ್ಚಿದರೂ ಏನೂ ಆಗೊಲ್ಲ. ಆದರೂ, ಹಾಗೆಯೇ ಅಲುಗಾಡದೆ ನಿಶ್ಚಲವಾಗಿರಿ. ನಾನು ಈಗ ಬರುತ್ತೇನೆ.' ಅವರು ತಮ್ಮ ಬ್ಯಾಗನ್ನು ಎತ್ತಿ ಹೊರನಡೆದರು. ನಾನು ಅವರನ್ನೇ ಹಿಂಬಾಲಿಸಿದೆ. 'ಡಾಕ್ಟರ್, ಹ್ಯಾರಿ ಈಗ ಸುರಕ್ಷಿತ ಎನ್ನಬಹುದೆ?' ನಾನು ಕೇಳಿದೆ.

'ಇಲ್ಲ!' ಡಾ. ಗಾಂಧೇರ್ ಭಾಯಿ ಹೇಳುತ್ತಾ ತುಟಿಯನ್ನು ಕಚ್ಚಿದರು. ಅವರು ಹೊರಡಲಣಿಯಾಗುತ್ತಿದ್ದಾರೆಂದು ನಾನು ತಿಳಿದಿದ್ದೆ.

'ಏಕೆ ಡಾಕ್ಟರ್, ಪ್ರತಿರೋಧಕ ಹಳತಾಯ್ತೆ?' ನಾನು ಆತಂಕದಿಂದ ಕೇಳಿದೆ.

'ಹಾಗೇನಿಲ್ಲ. ಅದು ಅವನ ಜೀವ ಉಳಿಸಲೂಬಹುದು, ಇಲ್ಲದಿರಲೂಬಹುದು. ನಾನು